**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 17.09.2025**

**ಪಾಟಿ ಸವಾಲು : 2ನೇ ಎದುರುದಾರರ ಪರ ಶ್ರೀ ಕೆ ಎಂ ಎಸ್ ಎನ್ ವಕೀಲರಿಂದಃ**

ಅಪಘಾತ ಸಂಭವಿಸಿದಾಗ ನಾನು ಮೋಟಾರು ಬೈಕಿನ ಹಿಂಬದಿ ಸವಾರನಾಗಿ ಹೋಗುತ್ತಿದ್ದೆ. ಬೈಕನ್ನು ಮೊಹಮದ್ ಅಬ್ಬಾಸ್ ರವರು ಚಾಲನೆ ಮಾಡುತ್ತಿದ್ದರು. ಮೊಹಮದ್ ಅಬ್ಬಾಸ್ ನನ್ನ ಸಹಪಾಠಿ. ಮೊಹಮದ್ ಅಬ್ಬಾಸ್ ಬೈಕ್ ಚಾಲನೆ ಮಾಡಲು ಚಾಲನ ಪತ್ರ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತಿತ ಸ್ಥಳದಿಂದ ಸ್ಥಳೀಯರು ನಮ್ಮನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆತಂದಿರುತ್ತಾರೆ. ನಾನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ದಿನದ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ನಾನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆಗೆ ಒಳಗಾಗಿಲ್ಲ. ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಚಿಕಿತ್ಸೆಗಾಗಿ ಹಣ ವೆಚ್ಚ ಮಾಡಿರುತ್ತೇನೆ ಎನ್ನುವ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆಗಿದ್ದ ಎಲ್ಲಾ ಗಾಯಗಳು ಈಗ ಗುಣಮುಖ ಆಗಿರುತ್ತವೆ ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ನಾನು ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ಎಸ್ ಎಸ್ ಎಲ್ ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಶರೀಫ್ ರವರ ಬಳಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದೆ. ಈ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ಬಿಪಿಎಲ್ ಕಾರ್ಡು ಹೊಂದಿರುತ್ತೇನೆ ಎಂದರೆ ಸರಿ. ನಾನು ತಿಂಗಳಿಗೆ 20 ಸಾವಿರ ರೂ. ಆದಾಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ಚಿಕಿತ್ಸಾ ಕಾಲದಲ್ಲಿ ನನ್ನ ತಾಯಿ ನನ್ನ ಜೊತೆ ಇದ್ದರು. ನಾನು ನನ್ನನ್ನು ನೋಡಿಕೊಳ್ಳುವವರಿಗೆ 20 ಸಾವಿರ ರೂ. ಹಣವನ್ನು ವೆಚ್ಚ

ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತ ಬೈಕ್ ಚಾಲನೆ ಮಾಡುತ್ತಿದ್ದ ಮೊಹಮದ್ ಅಬ್ಬಾಸ್ ರವರ ತಪ್ಪಿನಿಂದ ಸಂಭವಿಸಿದ್ದು ಇನ್ನೊಂದು ಬೈಕಿನ ಚಾಲಕನ ತಪ್ಪಿನಿಂದ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಂಭವಿಸಿದ ದಿನ ನಾವು ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಅಪಘಾತ ಸಂಭವಿಸಿದ ಮರುದಿನ ನಾನು ದೂರನ್ನು ದಾಖಲ್ಮಾಡಿರುತ್ತೇನೆ. ನಾನು ನನ್ನ ಚಿಕಿತ್ಸೆಗಾಗಿ 10 ಸಾವಿರ ರೂ. ಹಣವನ್ನು ವೆಚ್ಚ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತ ನಾನು ಪ್ರಯಾಣಿಸುತ್ತಿದ್ದ ಬೈಕ್ ಚಾಲಕನ ತಪ್ಪಿನಿಂದ ಸಂಭವಿಸಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಒಂದು ದಿನದ ನಂತರ ಇನ್ನೊಂದು ಬೈಕ್ ಚಾಲಕನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲ್ಮಾಡಿರುತ್ತೇನೆಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.